ನಿಂಗಿಯ ಅನುಪಸ್ಥಿತಿ ಸುಖವಾಗಿ ತಿಂದುಂಡು ಮೈ ಬೆಳೆಸಿಕೊಂಡಿದ್ದ ನನಗೆ ದೊಡ್ಡ ತಲೆನೋವು ತಂದೊಡ್ಡಿತ್ತು. ವಾರದಿಂದ ಎಲ್ಲಾ ಕೆಲಸಗಳನ್ನು ತಡವರಿಸುತ್ತಲೇ ಮಾಡಿ ಮುಗಿಸಿದ್ದೆ. ಬೆಳಗಿನ ಕೆಲಸ ಮುಗಿಸಿ ಬಳಲಿದ ದೇಹದೊಂದಿಗೆ ಉಸ್ಸೆಂದು ಬಂದು ಹಾಸಿಗೆಯಲ್ಲಿ ಉರುಳಿಕೊಂಡೆ. ಶಿರಕ್ಕೆ ಆಸರೆಯಾದ ತಲೆದಿಂಬು ಮುಗ್ಗಲು ವಾಸನೆ ಬೀರಿದಾಗ ಮಗ್ಗಲು ಹೊರಳಿ ಮಲಗಿದೆ. ಆದರೂ ತಥ್... ಕಮಟು ವಾಸನೆ ಎಂದು ಮೂಗು ಕಮೆಂಟು ಮಾಡತೊಡಗಿತು. ಬೇಸತ್ತು ಮೇಲೆದ್ದವಳೇ ಪಿಲ್ಲೋ ಕವರ್ ಬದಲಿಸಲು ಮುಂದಾದೆ. ನಿಂಗಿಯ ರಜೆಯ ಅವಧಿ ಅಂದಿಗೆ ಮುಗಿದು ಮರುದಿನ ಬರುವವಳಿದ್ದಳು.

ಅಲ್ಲಿಯವರೆಗೂ ಕಾಯಲು ಬಿಡದ ಘಮಲು ನನ್ನ ತಾಳ್ಮೆಗೆ ಸವಾಲೊಡ್ಡುತ್ತಲೇ ಬಡಿದೆಬ್ಬಿಸಿತು. ಮಡಿಯಾದ ಬೆಡ್ ಸ್ಪ್ರೆಡ್ ಸೆಟ್ಟನ್ನು ತಂದು ದಿಂಬಿನ ಹಳೆಯ ಕವಚವನ್ನು ಕಳಚಿದೆ. ಫೋಮ್ ದಿಂಬಿನ ಮುಖಭಾಗವೆಲ್ಲಾ ಬಂಗಿನ ಬಾಧೆಗೊಳಗಾದಂತೆ ಅಲ್ಲಲ್ಲಿ ಕಪ್ಪಾಗಿತ್ತು. ನಿದ್ರಿಸುವ ಸಮಯ ಬಾಯ್ತೆರೆದು ಮಗ್ಗುಲಾದವರ ಲಾಲಾರಸದಿಂದ ನೆಂದ ಶ್ವೇತವರ್ಣದ ಪಿಲ್ಲೋಗಳು ಅಲ್ಲಲ್ಲಿ ವಿಚಿತ್ರವಾದ ನಕ್ಷೆಯನ್ನೇ ಸೃಷ್ಟಿಸಿದ್ದವು. ಆ ಮ್ಯಾಪ್ ಕರೆಗೆ ವ್ಯಾಕ್ ಎನ್ನುವಂತಾಯಿತು. ಪ್ರತಿದಿನ ಇದೇ ದಿಂಬಿನ ಮೇಲೆ ಒರಗುತ್ತಿದ್ದ ನನ್ನ ಶಿರ ಹಲವು ಸೊಗಸಾದ ಕನಸುಗಳ ರಾಜ್ಯಾಡಳಿತಕ್ಕೆ ಸಿಂಹಾಸನವಾಗುತ್ತಿತ್ತು! ಆಗಾಗ ಹಾಸಿಗೆಯ ಮೇಲೆ ಇದೇ ದಿಂಬನ್ನು ಬೆನ್ನಿಗೆ ಆಸರೆಯಾಗಿರಿಸಿ ಕುಳಿತಾಗ ಅದೆಷ್ಟು ಸುಂದರ ಚಿತ್ರಗಳು ನನ್ನ ಮನೋಮೂಸೆಯಿಂದ ಪಾಕಗೊಂಡಿದ್ದವು! ಅದನ್ನೆಲ್ಲಾ ನೆನೆದು ಛೇ ಭಾವದಿಂದ ಎದ್ದು ಕುಳಿತೆ. ಮೇಲೆ ತಳುಕು ಒಳಗೆ ಹುಳುಕು ಎಂಬಂತಿದ್ದ ದಿಂಬಿನ ಆಂತರ್ಯವನ್ನೂ ಸ್ವಚ್ಛಗೊಳಿಸಲು ಮುಂದಾದೆ.

ಜೋಡಿ ದಿಂಬುಗಳನ್ನು ವಾಶ್ ರೂಮಿಗೆ ಕೊಂಡೊಯ್ದು ಧಾರಾಳವಾಗಿ ಡಿಟರ್ಜೆಂಟ್ ಲೇಪಿಸಿ ನೀರು ಸುರಿದು ಜಳಕ ಮಾಡಿಸಿದೆ. ಬ್ರಷ್‌ನಿಂದ ಲಘುವಾಗಿ ಉಜ್ಜಿದಾಗ ನೊರೆಯೊಂದಿಗೆ ಕಲೆಗಳೆಲ್ಲಾ ಕಳಚಿಕೊಂಡು ದಿಂಬುಗಳು ಮಿಂದು ಮಡಿಯಾದವು. ರೊಚ್ಚಿಗೆದ್ದು ಉಜ್ಜುತ್ತಿದ್ದ ನನ್ನ ಮನವೂ ಕೊಂಚ ನೊಚ್ಚಗಾಯಿತು. ಆದರೆ ಹತ್ತಿಯಂತೆ ಹಗುರವಾಗಿದ್ದ ದಿಂಬುಗಳು ನನ್ನ ಉಜ್ಜಯ್ಯನ ಅಭ್ಯಂಜನದಿಂದ ಸಮೃದ್ಧವಾಗಿ ನೀರು ಹೀರಿ ಜಂಬೂಸವಾರಿಗೆ ಸಿದ್ಧವಾದ ಜೋಡಿ ಆನೆಗಳಂತೆ ಜಲಭಾರದಿಂದ ತುಳುಕತೊಡಗಿದವು. ಹಿಂಡಿದಷ್ಟೂ ಅಕ್ಷಯವಾಗುತ್ತಿದ್ದ ನೀರನ್ನು ನಿವಾರಿಸುವುದು ಹೇಗೆಂದು ತಿಳಿಯದಾಯಿತು. ಅವಸರಕ್ಕೆ ಬಿದ್ದು ಬಿಸಿಲಿನ ಸುಳಿವೇ ಇಲ್ಲದ ಸಮಯದಲ್ಲಿ ಈ ದುಸ್ಸಾಹಸಕ್ಕೆ ಕೈ ಹಾಕಬಾರದಿತ್ತು ಎಂದು ಅರಿವಾಗುವಷ್ಟರಲ್ಲಿ ಕಾಲ ಮಿಂಚಿತ್ತು.

ತಾಸೊಂದು ಪಾಸ್ ಆದರೂ ದಿಂಬುಗಳಿನ್ನೂ ಎಣ್ಣೆ ಹೀರಿದ ಪೂರಿಯಂತೆ ತೊಟ್ಟಿಕ್ಕುತ್ತಿದ್ದವು. ಟಿಶ್ಯೂ ಇರಿಸಿ ಬಗೆಹರಿಸುವಷ್ಟು ಸರಳವಿರಲಿಲ್ಲ ಈ ಇಶ್ಯೂ. ನೀರಲ್ಲಿ ಮುಳುಗಿದವರನ್ನು ರೆಸ್ಕ್ಯೂ ಮಾಡಿ ಹೊಟ್ಟೆ ಅದುಮಿದಂತೆ ದಿಂಬಿನ ಹೊಟ್ಟೆಯನ್ನು ಅದುಮಿ ಅದುಮಿ ನೀರು ಕಕ್ಕಿಸಿ ನನಗೆ ಬೆವರಿಳಿಯುತ್ತಿತ್ತು. ಒಂದು ಪ್ಲಾಸ್ಟಿಕ್ ಚೇರನ್ನು ವಾಶ್ ರೂಮಿಗೆ ತಂದಿರಿಸಿ ಎರಡೂ ದಿಂಬುಗಳನ್ನೂ ಅದಕ್ಕೊರಗಿಸಿ ಉದ್ದುದ್ದ ನಿಲ್ಲಿಸಿದೆ. ಒರಗಿ ನಿಂತ ದಿಂಬುಗಳ ತಲೆಭಾಗದ ನೀರೆಲ್ಲಾ ಬುಡಕ್ಕಿಳಿಯುತ್ತಾ ನಿಧಾನವಾಗಿ ಚೇರಿನ ಸೀಟು ತೊಟ್ಟಿಕ್ಕತೊಡಗಿತು.



ಸಂಗೀತ ಟೀಚರ್ ಈ ಹಾಡು ಹೇಳಿ ಕೊಡಲಿಲ್ಲ...ಅಮ್ಮ!

ಎಲೆಕ್ಟ್ರಿಕ್ ವಾಹನಗಳಿಗೆ ಶಬ್ದ ಕಡ್ಡಾಯ


ಶಬ್ದ ಮಾಲಿನ್ಯ ತಡೆಯಲು ಪ್ರಯತ್ನಿಸುವಾಗಲೇ ಇಂಥ ಹೊಸ ವಾಹನಗಳು ಬಂದದ್ದೇ ಗೊತ್ತಾಗ್ತಿರಲಿಲ್ಲ!

ಹೊರಬಂದು ತಲೆಯೆತ್ತಿ ಸೂರ್ಯನಿಗಾಗಿ ಹುಡುಕಾಡಿದೆ. ಕರಿಮೋಡಗಳ ನಡುವೆ ಅಡಗಿ ಕುಳಿತಿದ್ದ ಅವ ಐಸ್ಪೈಸ್ ಆಡುತ್ತಿದ್ದ. ನಾನು ಹೊರಗೂ ಒಳಗೂ ಎಡತಾಕುತ್ತಾ ಆಗಾಗ ವಾಶ್ ರೂಮಿಗೆ ತೆರಳಿ ಒಂಟೆಯ ಡುಬ್ಬದಂತಿದ್ದ ದಿಂಬಿನ ಬುಡವನ್ನು ಒತ್ತಿ ನೀರಿಳಿಸುತ್ತಿದ್ದೆ. ಹೀಗೆ ನೀರಿನೊಂದಿಗೆ ಅಪ್ಪಿ ಲಹರಿಯಾಗಿದ್ದ ದಿಂಬು ಹಿಂಡಿದಷ್ಟೂ ಅಕ್ಷಯವಾಗುತ್ತಿತ್ತು.

ಮರುದಿನ ಬೇಗನೆದ್ದು ವಾಶ್ ರೂಮಿಗೆ ಹೋದೆ. ಇನ್ನೂ ದ್ರವಿಸುತ್ತಲೇ ಇದ್ದ ದಿಂಬುಗಳು ಒಂದು ಬಗೆಯ ಹಳಸಲು ವಾಸನೆಯನ್ನು ಪಸರಿಸುತ್ತಿದ್ದವು. ಪುನಃ ಒಗೆಯದೆ ಅದು ನಿವಾರಣೆಯಾಗದೆಂದು ಮನ ಎಚ್ಚರಿಸಿತು. ಬೇಸರದಿಂದಲೇ ಹೊರಬಂದೆ. ಆಗಸದಿ ಗಾಢವಾಗಿ ಆವರಿಸಿದ್ದ ಕರಿ ಮೋಡಗಳು ಸೂರ್ಯನಿಗೆ ಬಿಡುಗಡೆ ನೀಡುವ ಸೂಚನೆ ಕಾಣಲಿಲ್ಲ. ಬೇರೆ ದಾರಿತೋಚದೆ ನಿಟ್ಟುಸಿರು ಚೆಲ್ಲುತ್ತಾ ಗದ್ದಕ್ಕೆ ಕೈಯೂರಿ ಕುಳಿತೆ.

‘ಏನಾತಕ್ಕಾ... ಯಾಕಿಂಗ್ ಕೂತ್ಕಂಡಿದೀರಾ...?’ ನಗುತ್ತಲೇ ಗೇಟ್ ತೆರೆದು ಒಳಬಂದಳು ನಿಂಗಿ. ಒಂದು ವಾರದ ರಜೆಯಿಂದ ಅವಳಲ್ಲಿ ನವಚೈತನ್ಯ ಚಿಗುರಿತ್ತು.

‘ಇವತ್ತು ಬಂದ್ಯಾ ತಾಯಿ ಬಾ...’ ವಾರದಿಂದ ಬಳಲಿ ಬೆಂಡಾಗಿದ್ದ ನನ್ನ ತನುಮನ ಖಾರವಾದ ಪ್ರತಿಕ್ರಿಯೆ ಹೊರಹಾಕಿ ಕೊಂಚ ಸಮಾಧಾನಗೊಂಡಿತು. ಅದಕ್ಕೆಲ್ಲಾ ಸೊಪ್ಪು ಹಾಕಿ ಅಭ್ಯಾಸವಿಲ್ಲದ ನಿಂಗಿ ಕೈ ತಿರುವುತ್ತಾ ಒಳಹೋದಳು. ವಾಶ್ ರೂಮಿನಿಂದ ಹೊರಬಂದವಳೇ ‘ಇದೇನಕ್ಕಾ ದಿಂಬೆಲ್ಲಾ ನಾತ್ರ್ಯಾವೆ?’ ಎನ್ನುತ್ತಾ ಇನ್ನೂ ನಿಧಾನವಾಗಿ ತೊಟ್ಟಿಕ್ಕುತ್ತಿದ್ದ ಅವನ್ನು ಅವಳಿ ಕೂಸುಗಳಂತೆ ಎರಡೂ ಬದಿಯ ಸೊಂಟಕ್ಕಾನಿಸಿಕೊಂಡಳು. ಹಿಂದಿನ ದಿನದ ಸಾಹಸವನ್ನೆಲ್ಲಾ ಸಪ್ಪೆ ಮುಖದಲ್ಲೇ ಅವಳಿಗೆ ಬಣ್ಣಿಸಿದೆ. ಪಕಪಕನೆ ನಕ್ಕ ನಿಂಗಿ ‘ಅಯ್ಯೋ ಅಕ್ಕಾ ನಿಮ್ಗೆ ಅಷ್ಟೂ ತಲೆ ಬ್ಯಾಡ್ವಾ! ಮಾಡ (ಮೋಡ) ಇರೋವಾಗ ಯಾವನಾದ್ರೂ ದಿಂಬ್ ತೊಳೀತಾನಾ...?’ ಎನ್ನುತ್ತಾ ಬಾಯಿ ಮೇಲೆ ಬೆರಳಿರಿಸಿಕೊಂಡು ವ್ಯಂಗ್ಯ ನಗು ಬೀರಿ ನನ್ನ ಮೇಲಿನ ಹಳೆಯ ಕೋಪವನ್ನೆಲ್ಲಾ ಘನವಾಗಿ ತೀರಿಸಿಕೊಂಡಳು.

‘ಈಗ ಅದೆಲ್ಲ ಬಿಡು. ಇದಕ್ಕೆ ಏನಾದ್ರೂ ಪರಿಹಾರ ಹೇಳು’

‘ಅದೇನ್ ಕಷ್ಟ ಇಲ್ಲ. ನಿಮ್ ತವ ಅದಲ್ಲಾ ಪುಸ್ ಪುಸ್ ಅಂತ ಒಡ್ಕಳ ಸೆಂಟು, ಅದುನ್ನೂ ಬಿಸಿ ಪ್ಯಾನುನ್ನೂ ತನ್ನಿ ಇಲ್ಲಿ...’ ಎಂದಳು. ಪಿಳಪಿಳನೆ ಕಣ್ಣು ಬಿಡುತ್ತಾ ಕೆಲಕ್ಷಣ ಅವಳನ್ನೇ ದಿಟ್ಟಿಸಿದೆ.

‘ಏ... ನಾನ್ ಏಳಿದ್ದು ನಿಮ್ ತಲೀಗೋಗ್ಲಿಲ್ವೆನಕ್ಕಾ? ಅದೇ ಕೂದ್ಲು ಒಣ್ಗುಸ್ಕತಿರಲ್ಲಾ ಬಿಸಿ ಪ್ಯಾನು ಅದುನ್ನೂ ಸೆಂಟುನ್ನೂ ತಗ ಬನ್ನಿ’ ಎಂದಾಗ ನನ್ನ ಚಿಂತೆಗೊಂದು ಬೆಳಕಿಂಡಿ ಮೂಡಿದಂತಾಯಿತು. ಕಾಣದ ಬಿಸಿಲಿಗೆ ಹಂಬಲಿಸುತ್ತಾ ಇಡೀ ದಿನ ಪರಿತಪಿಸಿದ್ದ ನಾನು ಕ್ಷಣಾರ್ಧದಲ್ಲಿ ನಿಂಗಿ ಸೂಚಿಸಿದ ಪರಿಹಾರಕ್ಕೆ ಸೋಜಿಗಗೊಂಡೆ.

ಒಂದು ಚಾಪೆಯ ಮೇಲೆ ದಿಂಬಿರಿಸಿ ಅಲ್ಲಲ್ಲಿ ಹಗುರವಾಗಿ ಅತ್ತರು ಸಿಂಪಡಿಸುತ್ತಾ ಹೇರ್ ಡ್ರೈಯರ್‌ನಿಂದ ನಿಂಗಿ ಭರ್ರ್... ರ್... ಝುಂಯ್... ಝುಂಯ್ ಎಂದು ದಿಂಬಿಗೆ ಶಾಖ ನೀಡಿ ಒಣಗಿಸುತ್ತಿದ್ದರೆ ನಾನು ಒಣಮುಖ ಹೊತ್ತು ಅವಳಿಗೆ ಅಸಿಸ್ಟೆಂಟ್ ಆಗಿ ಕಾರ್ಯನಿರ್ವಹಿಸತೊಡಗಿದೆ.

ಪ್ರತಿಕ್ರಿಯಿಸಿ:feedback@sudha.co.in